<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ</u>

ಸಿಸಿ ನಂ. *908/2022*

ಚಾಸಾ- 01 ಪ್ರಾಸಾ-01

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 27.11.2024

ಹೆಸರು ಃ ರುಬೀನಾಬೇಗಂ

ಗಂಡನ ಹೆಸರು ಃ ಇಸ್ಮಾಯಿಲ

ವಯಸ್ಸು ಃ 43 ವರ್ಷ

ಉದ್ಯೋಗ ಃ ಮನೆಗೆಲಸ

ವಾಸಸ್ಥಳ ಃ ಜೇವರ್ಗಿ ಕೆ

-: <u>ಮುಖ್ಯ ವಿಚಾರಣೆ :- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:-</u>

ಚಾಸಾ-2 ರವರ ಪರಿಯ ಇರುತ್ತದೆ. ಚಾಸಾ-6, 7, 9 ಮತ್ತು 13 ರವರ ಪರಿಚಯ ಇರುವುದಿಲ್ಲಾ. ಚಾಸಾ-8 ಮತ್ತು 10 ನನ್ನ ಮೈದುನರಾಗಬೇಕು. ಚಾಸಾ-11 ಮತ್ತು 12 ನನ್ನ ಮಕ್ಕಳಾಗಬೇಕು. ಮೃತ ಇಸ್ಮಾಯಿಲ ನನ್ನ ಗಂಡನಾಗಬೇಕು.

ಹೀಗೆ ಒಂದು ದಿನ ನನ್ನ ಗಂಡನಿಗೆ ಅಪಘಾತವಾಗಿ ಕಾಲಿಗೆ ಪೆಟ್ಟಾಗಿದೆ ಅಂತಾ ಚಾಸಾ-10 ರವರು ಬಂದು ತಿಳಿಸಿರುತ್ತಾರೆ. ಆ ನಂತರ ನಾವು ನೇರವಾಗಿ ಪೋಲಿಸರ ಠಾಣೆಗೆ ಹೋಗಿ ದೂರು ನೀಡಿರುತ್ತೇವೆ. ತದ ನಂತರ ಮರಳಿ ನನ್ನ ಮೈದುನರೊಂದಿಗೆ ಮನೆಗೆ ಹೋಗಿರುತ್ತೇನೆ. ಮನೆಗೆ ಹೋದ ನಂತರ ನನಗೆ ನನ್ನ ಗಂಡ ತೀರಿಕೊಂಡ ವಿಷಯ ಗೊತ್ತಾಗಿರುತ್ತದೆ.

ಆ ನಂತರ ಸದರಿ ಅಪಘಾತದ ಕುರಿತು ತಿಳಿದಿದ್ದೇನೆಂದರೆ ರಸ್ತೆಯ ಮೇಲೆ ಒಂದು ಟ್ರ್ಯಾಕ್ಟರ ಯಾವುದೇ ಸೂಚನಾ ಫಲಕಗಳನ್ನು ಅಳವಡಿಸದೆ ರಸ್ತೆಯ ಮೇಲೆ ನಿಂತಿದ್ದು, ಆಗ ಸಮಯ ಸಂಜೆ 06.30 ಗಂಟೆ ಆಗಿತ್ತು, ನನ್ನ ಗಂಡ ತನ್ನ ಮೋಟಾರ ಸೈಕಲ ಮೇಲೆ ಹೋಗಿ ನಿಂತಿದ್ದ ಟ್ರ್ಯಾಕ್ಟರಗೆ ಡಿಕ್ಕಿ ಪಡಿಸಿರುತ್ತಾನೆ. ಆಗ ಆತನ ತಲೆಗೆ ಗಂಭೀರ ಗಾಯವಾಗಿ ರಕ್ತಸ್ರಾವ ಆಗಿರುತ್ತದ. ಹೀಗೆ ಅಪಘಾತವಾಗಿ ನನ್ನ ಗಂಡ ಚಿಕಿತ್ಸೆ ಫಲಕಾರಿಯಾಗದೆ ತೀರಿಕೊಂಡಿರುತ್ತಾನೆ.

(ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ**,** ಅನುಮತಿ ನೀಡಲಾಯಿತು)**.**

<u>ಪಾಟೀ ಸವಾಲುಃ ಸ.ಸ.ಅ. ರವರಿಂದ</u>

ದಿಃ 09.10.2021 ರಂದು ನನ್ನ ಗಂಡನಿಗೆ ಅಪಘಾತವಾಗಿರುತ್ತದೆ ಎಂದರೆ ಸರಿ. ಅಫಜಲಪೂರದ ಸಿದ್ದಯ್ಯ ಸ್ವಾಮೀ ರವರ ಕಾಟನ್ ಮಿಲ್‌ಗೆ ಹೋಗಿ ಬರುವಾಗ ಸಾಯಂಕಾಲ 06.45 ಕ್ಕೆ ಸುನೀಲ ನಿಂಬಾಳ ರವರ ಹೊಲದ ಹತ್ತಿರ ರಸ್ತೆಯ ಎಡಗಡೆ ಟ್ರ್ಯಾಕ್ಟರ ನಂ.KA.28/TC-7581 ರ ಚಾಲಕನ್ನು ಟ್ರ್ಯಾಲಿ ನಂ.MH-13/T-5045 ಮತ್ತು ಟ್ರ್ಯಾಲಿ ನಂ.MH-13/T-5046 ಇವುಗಳಿಗೆ ಯಾವುದೇ ಸೂಚನೆ ಇಲ್ಲದೆ ಸಾರ್ವಜನಿಕ ಸಂಚಾರಕ್ಕೆ ಅಡೆಚಡೆ ಆಗುವಂತೆ ರೋಡಿನ ಎಡಬದಿಗೆ ನಿಲ್ಲಿಸಿ ಹೋಗಿದ್ದ ಎಂದರೆ ಸರಿ. ಆಗ ನನ್ನ ಗಂಡ ಸದರಿ ನಿಂತ ಟ್ರ್ಯಾಕ್ಟರಗೆ ಡಿಕ್ಕಿ ಪಡಿಸಿರುತ್ತಾನೆ ಎಂದರೆ ಸರಿ.

ಆ ನಂತರ ನಾನು, ಚಾಸಾ-8 ಮತ್ತು 9 ರವರು ಕುಡಿಕೊಂಡು ಅಪಘಾತ ಸ್ದಳಕ್ಕೆ ಹೋಗಿ ನೋಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಗಂಡ ಸ್ದಳದಲ್ಲಿ ಮೃತ ಪಟ್ಟಿರುತ್ತಾನೆ ಎಂದರೆ ನಾನು ಅಪಘಾತ ಸ್ದಳಕ್ಕೆ ಹೋಗಿಲ್ಲಾ ಎಂದು ನುಡಿಯುತ್ತಾರೆ. ಟ್ರ್ಯಾಕ್ಟರ ಚಾಲಕನ ತಪ್ಪಿನಿಂದ ಸದರಿ ಅಪಘಾತವಾಗಿರುತ್ತದೆ ಎಂದು ಪೋಲಿಸ ಠಾಣೆಯಲ್ಲಿ ದೂರನ್ನು ನೀಡಿರುತ್ತೇನೆ ಎಂದರೆ ಸರಿ.

ಸಾಕ್ಷಿಗೆ ದೂರಿನ ಪ್ರತಿಯನ್ನು ತೋರಿಸಿದ್ದು, ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-**1** ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-**1**(ಎ) ಎಂದು ಗುರುತಿಸಲಾಯಿತು. ಮರುದಿನ ಪೋಲಿಸರು ನನ್ನನ್ನು ಠಾಣೆಗೆ ಕರೆಯಿಸಿ ಟ್ರ್ಯಾಕ್ಟರ ಚಾಲಕನ ಹೆಸರು ಅಂಬರೀಶ ತಂದೆ ಅಪ್ಪಸಾಬ ಅಂತಾ ತಿಳಿಸಿರುತ್ತಾರೆ ಎಂದರೆ ಸರಿ. ಟ್ರ್ಯಾಕ್ಟರ ಚಾಲಕನನ್ನು ನಾನು ನೋಡಿರುವುದಿಲ್ಲಾ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಗುರುತಿಸಲು ವಿಫಲರಾಗಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿ ಶ್ರೀ **SGA** ವಕೀಲರಿಂದ</u>

ನಾನು ನನ್ನ ಗಂಡನ ಮೃತ ದೇಹವನ್ನು ನಮ್ಮ ಮನೆಗೆ ತಂದಾಗ ನೋಡಿರುತ್ತೇನೆ. ನಮಗೆ ತಿಳಿಸಿದ ಚಾಸಾ-2 ರವರು ನನ್ನ ಗಂಡನ ಮೋಟಾರ ಸೈಕಲ ಮುಂದೆ ಹೋಗುತ್ತಿದ್ದರು ಎಂದು ತಿಳಿಸಿರುತ್ತಾರೆ. ಟ್ರ್ಯಾಕ್ಟರ ಚಲಾಯಿಸುತ್ತಿತ್ತು ಅಥವಾ ಇಲ್ಲವೋ ಎಂಬುವುದು ಹತ್ತಿರ ದಿಂದ ಇದ್ದಾಗ ಗೊತ್ತಾಗುವುದಿಲ್ಲಾ ಎಂದರೆ ಸಾಕ್ಷಿಯು ಟ್ರ್ಯಾಕ್ಟರ ನಿಂತಿತ್ತು ಎಂದು ನುಡಿಯುತ್ತಾರೆ.

ಟ್ರ್ಯಾಕ್ಟರ ನಿಧಾನವಾಗಿ ಚಲಾಯಿಸುತ್ತಿತ್ತು ಆಗ ಮೃತ ನಿಮ್ಮ ಗಂಡ ಅತಿವೇಗ ಮತ್ತು ನಿಶ್ಕಾಳಜಿ ತನದಿಂದ ಮೋಟಾರ ಸೈಕಲನ್ನು ಚಲಾಯಿಸಿಕೊಂಡು ಬಂದು ಡಿಕ್ಕಿ ಪಿಡಿಸಿರುತ್ತಾನೆ ಎಂದು ಸೂಚಿಸುವುದು ಸರಿಯಲ್ಲ. ಅಫಜಲಪೂರ-ಕಲಬುರಗಿ ರಸ್ತೆ ರಾಜ್ಯ ಹೆದ್ದಾರಿ ಇರುತ್ತದೆ ಎಂದರೆ ಸರಿ.

ಮೃತ ನಿಮ್ಮ ಗಂಡ ತಾನಾಗಿ ಮುಂದೆ ಹೋಗುತ್ತಿದ್ದ ಟ್ರ್ಯಾಕ್ಟರಗೆ ಡಿಕ್ಕಿಪಡಿಸಿ ಅಪಘಾತಪಡಿಸಿಕೊಂಡಿದರು ಸಹಾ ಟ್ರ್ಯಾಕ್ಟರ ನಿಂತಿತ್ತು ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ವಿಮೆ ಪರಿಹಾರ ಪಡೆಯುವ ಸಲುವಾಗಿ ಆರೋಪಿ ಮೇಲೆ ಸುಳ್ಳು ಪ್ರಕರಣದ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ - ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ ದಂಡಾಧಿಕಾರಿಗಳು
ಅಫಜಲಪೂರ

<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ</u>

ಸಿಸಿ ನಂ. *908/2022*

ಚಾಸಾ- 02 ಪ್ರಾಸಾ-02

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 27.11.2024

| | |
|---|---|
| ಹೆಸರು | ಃ ಪ್ರಕಾಶ |
| ತಂದೆಯ ಹೆಸರು | ಃ ಬಾಬುರಾವ |
| ವಯಸ್ಸು | ಃ 34 ವರ್ಷ |
| ಉದ್ಯೋಗ | ಃ ಒಕ್ಕಲುತನ |
| ವಾಸಸ್ಥಳ | ಃ ಜೇವರ್ಗಿ ಕೆ |

-: <u>ಮುಖ್ಯ ವಿಚಾರಣೆ **:-** ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ**:-**</u>

ಚಾಸಾ-3, 8 ರಿಂದ 10 ರವರ ಪರಿಚಯ ಇರುತ್ತದೆ. ಚಾಸಾ-6 ಮತ್ತು 7 ರವರ ಪರಿಚಯ ಇಲ್ಲಾ. ಮೃತ ಇಸ್ಮಾಯಿಲ್ ರವರ ಪರಿಚಯ ಇರುತ್ತದೆ. ಸಾಕ್ಷಿಗೆ ಶವ ಪಂಚನಾಮೆಯ ಪ್ರತಿಯನ್ನು ತೋರಿಸಿದ್ದು, ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-**2** ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-**2**(ಎ) ಎಂದು ಗುರುತಿಸಲಾಯಿತು.

2021 ರಲ್ಲಿ ಅಪಘಾತದವಾದ ದಿನ ಶವ ಪಂಚನಾಮೆ ಮಾಡುವ ಸಮಯದಲ್ಲಿ ನಾನು ಹಾಜರಿದ್ದು, ಆಗ ನನ್ನ ಸಹಿ ಪಡೆದುಕೊಂಡಿರುತ್ತಾರೆ. ಸಾಕ್ಷಿಗೆ ಶವ ಪಂಚನಾಮೆ ಕಾಲಕ್ಕೆ ತೆಗೆದ ಭಾವಚಿತ್ರವನ್ನು ತೋರಿಸಿದ್ದ:, ಸಾಕ್ಷಿಯು ಅದರಲ್ಲಿ ತಾನು ಇರುವುದನ್ನು ನೋಡಿ ಗುರುತಿಸಿದ್ದು ಸದರಿ ಭಾವಚಿತ್ರವನ್ನು ನಿಪಿ-**3** ಎಂದು ಗುರುತಿಸಲಾಯಿತು.

ನಾನು ಅಪಘಾತದ ಹೇಗೆ ಆಗಿದೆ ಎಂಬುವುದನ್ನು ನಾನು ನೋಡಿರುವುದಿಲ್ಲಾ, ಆದರೆ ಅಪಘಾತವಾಗಿತ್ತು, ಮೃತ ದೇಹ ಬಿದಿದ್ದರಿಂದ ಆತನು ನಮ್ಮೂರಿನವರು ಇರುವುದರಿಂದ ಆಸ್ಪತ್ರೆಗೆ ತೆಗೆದುಕೊಂಡು ಹೋಗಿರುತ್ತೇವೆ. ಅಪಘಾತದ ಹೇಗೆ ಮತ್ತು ಯಾರ ತಪ್ಪಿನಿಂದ ಆಯಿತು ಎಂದು ನನಗೆ ಹೇಳಲು ಬರುವುದಿಲ್ಲಾ.

(ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು).

**ಪಾಟೀ ಸವಾಲುಃ ಸ.ಸ.ಅ. ರವರಿಂದ**

ದಿಃ 09.10.2021 ರಂದು ಅಫಜಲಪೂರದ ಸಿದ್ದಯ್ಯ ಸ್ವಾಮೀ ರವರ ಕಾಟನ್ ಮಿಲ್‌ಗೆ ಹತ್ತಿರ ನಾನು ಹೋಗಿರುತ್ತೇನೆ ಎಂದರೆ ಸರಿ. ಒಂದು ಟ್ರ್ಯಾಕ್ಟರ ರಸ್ತೆಯ ಎಡಬದಿಯಲ್ಲಿ ಯಾವುದೇ ಸೂಚನಾ ಫಲಕ ಇಲ್ಲದೆ ನಿಲ್ಲಿಸಿದ್ದು, ಅದಕ್ಕೆ ಹೋಗಿ ಮೃತ ಇಸ್ಮಾಯಿಲ್ ಡಿಕ್ಕಿ ಪಡಿಸಿದ್ದರಿಂದ ಅಪಘಾತವಾಗಿರುತ್ತದೆ ಎಂದರೆ ಸಾಕ್ಷಿಯು ಏನಾಗಿರುತ್ತದೆ ನನಗೆ ಗೊತ್ತಿಲ್ಲಾ ಎಂದು ನುಡಿಯುತ್ತಾರೆ. ನಾನು ಹೋಗಿ ನೋಡಿದಾಗ ಮೃತ ಇಸ್ಮಾಯಿಲ್ ತಲೆಗೆ, ಮೈಕೈಗೆ ಗಂಭೀರ ಗಾಯವಾಗಿ ಸ್ಥಳದಲ್ಲಿ ಮೃತ ಪಟ್ಟಿದ್ದ ಎಂದರೆ ಸರಿ. ನಂತರ ನಾನು ಸದರಿ ಅಪಘಾತದ ವಿಷಯವನ್ನು ಚಾಸಾ-8 ರವರಿಗೆ ಫೋನ್ ಮಾಡಿ ತಿಳಿಸಿರುತ್ತೇನೆ ಎಂದರೆ ಸರಿ.

ನಂತರ ಚಾಸಾ-1, 8 ಮತ್ತು 9 ರವರು ಘಟನಾ ಸ್ಥಳದಕ್ಕೆ ಬಂದು ನಂತರ 108 ಅಂಬುಲೆನ್ಸನಲ್ಲಿ ಮೃತ ದೇಹವನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋಗಿರುತ್ತೇವೆ ಎಂದರೆ ಸರಿ. ರಸ್ತೆಯ ಮೇಲೆ ಟ್ರ್ಯಾಕ್ಟರ ನಿಲ್ಲಿಸಿದ ಚಾಲಕನ ಹೆಸರು ಅಂಬರೀಶ ತಂದೆ ಅಪ್ಪಸಾಬ ಇರುತ್ತದೆ ಎಂದು ಕೇಳಿ ತಿಳಿದುಕೊಂಡಿರುತ್ತೇನೆ. ದಿಃ10.10.2021 ರಂದು ಆರೋಪಿತನ ತಪ್ಪಿನಿಂದ ಅಪಘಾತವಾಗಿರುತ್ತದೆ ಎಂದು ಪೋಲಿಸರ ಮುಂದೆ ಹೇಳಿಕೇ ನೀಡಿರುತ್ತೇನೆ ಎಂದರೆ ಸರಿ.

ಸಾಕ್ಷಿಗೆ ಅಪಘಾತಕ್ಕೆ ಒಳಗಾದವು ಎಂದು ಹೇಳು ಟ್ರ್ಯಾಕ್ಟರ, ಟ್ರ್ಯಾಲಿ ಮತ್ತು ಮೋಟಾರ ಸೈಕಲನ ಭಾವ ಚಿತ್ರ ಗಳನ್ನು ತೋರಿಸಿದ್ದು, ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-**4** ರಿಂದ ನಿಪಿ-**14** ಎಂದು ಗುರುತಿಸಲಾಯಿತು. ನಾನು ಆ ದಿನ ಟ್ರ್ಯಾಕ್ಟರ ಚಾಲಕನನ್ನು ನೋಡಿರುವುದಿಲ್ಲಾ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಗುರುತಿಸುವಲ್ಲಿ ವಿಫಲರಾಗಿರುತ್ತಾರೆ.

ಪಾಟೀ ಸವಾಲುಃ ಆರೋಪಿ ಶ್ರೀ **SGA** ವಕೀಲರಿಂದ

ಆರೋಪಿ ಪರ ವಕೀಲರು ಯಾವುದೇ ಪಾಟೀ ಸವಾಲು ಇಲ್ಲಾ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆಃ - ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ ದಂಡಾಧಿಕಾರಿಗಳು
ಅಫಜಲಪೂರ

<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ</u>

ಸಿಸಿ ನಂ. *908/2022*

ಚಾಸಾ- 05 ಪ್ರಾಸಾ-03

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 27.11.2024

| | |
|---|---|
| ಹೆಸರು | ಃ ಸೈಫಾನ |
| ತಂದೆಯ ಹೆಸರು | ಃ ಅಬ್ಬಾಸ ಅಲಿ |
| ವಯಸ್ಸು | ಃ 38 ವರ್ಷ |
| ಉದ್ಯೋಗ | ಃ ಕೂಲಿಕೆಲಸ |
| ವಾಸಸ್ಥಳ | ಃ ಜೇವರ್ಗಿ ಕೆ |

-: <u>ಮುಖ್ಯ ವಿಚಾರಣೆ :- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:-</u>

ಚಾಸಾ-2 ಮತ್ತು 4 ರವರ ಪರಿಚಯ ಇರುತ್ತದೆ. ಸಾಕ್ಷಿಗೆ ಗುನ್ಹೆ ಸ್ಥಳದ ಪಂಚನಾಮೆಯ ಪ್ರತಿಯನ್ನು ತೋರಿಸಿದ್ದು, ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-**15** ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-**15**(ಎ) ಎಂದು ಗುರುತಿಸಲಾಯಿತು.

ಒಂದು ದಿನ ಟ್ರ್ಯಾಕ್ಟರ ನಿಂತಿದ್ದು ಅದಕ್ಕೆ ಮೋಟಾರ ಸೈಕಲ ಡಿಕ್ಕಿ ಪಡಿಸಿ ಅಪಘಾವಾಗಿತ್ತು, ಆಗ ನನ್ನ ಸಹಿ ಪಡೆದುಕೊಂಡಿರುತ್ತಾರೆ. ನನ್ನ ಸಮಕ್ಷಮ ಯಾವುದೇ ವಾಹನಗಳನ್ನು ಜಪ್ತಿ ಪಡಿಸಿಕೊಂಡಿರುವುದಿಲ್ಲಾ.

**(ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು).**

<u>ಪಾಟೀ ಸವಾಲುಃ ಸ.ಸ.ಅ. ರವರಿಂದ</u>

ದಿಃ 10.10.2021 ರಂದು ನನ್ನ ಹಾಗು ಚಾಸಾ-4 ರವರ ಸಮಕ್ಷಮ ಅಪಘಾತವಾದ ಸ್ಥಳದಲ್ಲಿ ಪೋಲಿಸರು ಪಂಚನಾಮೆಯನ್ನು ಮಾಡಿರುತ್ತಾರೆ ಎಂದರೆ ಸರಿ. ಪಂಚನಾಮೆಯ ಕಾಲಕ್ಕೆ ಟ್ರ್ಯಾಕ್ಟರ, ಟ್ರ್ಯಾಲಿಗಳು ಮತ್ತು ಒಂದು ಮೋಟಾರ ಸೈಕಲನ್ನು ಜಪ್ತಿ ಪಡಿಸಿಕೊಂಡಿರುತ್ತಾರೆ ಎಂದರೆ ಸರಿ.

ಸಾಕ್ಷಿಗೆ ಗುನ್ನೆ ಸ್ಥಳದ ಪಂಚನಾಮೆ ಕಾಲಕ್ಕೆ ತೆಗೆದ ಭಾವಚಿತ್ರವನ್ನು ತೋರಿಸಿದ್ದು, ಸಾಕ್ಷಿಯು ಅದರಲ್ಲಿ ತನ್ನನ್ನು ನೋಡಿ ಗುರುತಿಸಿದ್ದು ಭಾವಚಿತ್ರವನ್ನು ನಿಪಿ-**16** ಎಂದು ಗುರುತಿಸಲಾಯಿತು. ಸಾಕ್ಷಿಗೆ ಅಪಘಾತಕ್ಕೆ ಒಳಗಾದವು ಎಂದು ಹೇಳು ಟ್ರ್ಯಾಕ್ಟರ, ಟ್ರ್ಯಾಲಿ ಮತ್ತು ಮೋಟಾರ ಸೈಕಲನ ಭಾವ ಚಿತ್ರಗಳನ್ನು ತೋರಿಸಿದ್ದು, ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ-4 ರಿಂದ ನಿಪಿ-14 ಎಂದು ಗುರುತಿಸಲಾಗಿರುತ್ತದೆ.

<u>ಪಾಟೀ ಸವಾಲುಃ ಆರೋಪಿ ಶ್ರೀ **SGA** ವಕೀಲರಿಂದ</u>

ಆರೋಪಿ ಪರ ವಕೀಲರು ಯಾವುದೇ ಪಾಟೀ ಸವಾಲು ಇಲ್ಲಾ ಎಂದು ತಿಳಿಸಿರುತ್ತಾರೆ.

<u>ಮರು ವಿಚಾರಣೆಃ - ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ ದಂಡಾಧಿಕಾರಿಗಳು
ಅಫಜಲಪೂರ

<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ</u>

ಸಿಸಿ ನಂ. *908/2022*

ಚಾಸಾ- 08 ಪ್ರಾಸಾ-04

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 27.11.2024

ಹೆಸರು ಃ ಶಬ್ಬೀರ

ತಂದೆಯ ಹೆಸರು ಃ ಗುಲಾಲಸಾಬ

ವಯಸ್ಸು ಃ 38 ವರ್ಷ

ಉದ್ಯೋಗ ಃ ಒಕ್ಕಲುತನ

ವಾಸಸ್ಥಳ ಃ ಜೇವರ್ಗಿ ಕೆ

-: <u>ಮುಖ್ಯ ವಿಚಾರಣೆ :- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:-</u>

ಚಾಸಾ-2 ಮತ್ತು 9 ರವರ ಪರಿಚಯ ಇರುತ್ತಾರೆ. ಚಾಸಾ-1 ನನ ಅತ್ತಿಗೆ, ಚಾಸಾ-10 ರವರು ನನ್ನ ಅಣ್ಣ. ಚಾಸಾ-11 ಮತ್ತು 12 ಮೃತ ಇಸ್ಮಾಯಿಲ್ ರವರ ಮಕ್ಕಳು ಇರುತ್ತಾರೆ. ಮೃತ ಇಸ್ಮಾಯಿಲ್ ನನ್ನ ಅಣ್ಣನಾಗಬೇಕು.

ದಿಃ 09.10.2021 ರಂದು ಸಾಯಂಕಾಲ ನಾನು ಊರಿಲ್ಲಿ ಇದ್ದಾಗ ನನಗೆ ಒಂದು ಫೋನ್ ಕರೆ ಬಂದಿದ್ದು ಆಗ ಅವರು ಮೃತ ಇಸ್ಮಾಯಿಲ್ ಅಪಘಾತವಾದ ವಿಷಯವನ್ನು ತಿಳಿಸಿರುತ್ತಾರೆ. ನಂತರ ನಾವು ಘಟನಾ ಸ್ದಳಕ್ಕೆ ಬರುವಷ್ಟರಲ್ಲಿ ಮೃತ ದೇಹವನ್ನು ಸರಕಾರಿ ಆಸ್ಪತ್ರೆಗೆ ತೆಗೆದುಕೊಂಡು ಬಂದಿರುತ್ತಾರೆ. ಆ ದಿನ ನನ್ನ ಅಣ್ಣ ಕಲಬುರಗಿಗೆ ಹೋಗಿ ಮರಳಿ ಬರುವಾಗ ರಸ್ತೆಯ ಮೇಲೆ ಟ್ರ್ಯಾಕ್ಟರ ಮತ್ತು ಅದರ ಟ್ರ್ಯಾಲಿಗಳನ್ನು ರಸ್ತೆಯ ಮೇಲೆ ನಿಲ್ಲಿಸಿ ಹೋಗಿದ್ದರಿಂದ ಮತ್ತು ಅದಕ್ಕೆ ಯಾವುದೇ ಸೂಚನಾ ಫಲಕ ಅಥವಾ ರೇಡಿಯಂ ಹಚ್ಚದೇ ಇದಿದ್ದರಿಂದ ಮುಂದೆ ಇರುವುದು

ಗೊತ್ತಾಗದೆ ನನ್ನ ಅಣ್ಣ ಅದಕ್ಕೆ ಹೋಗಿ ಡಿಕ್ಕಿ ಪಡಿಸಿದರಿಂದ ಅಪಘಾತವಾಗಿರುತ್ತದೆ. ಆ ಸಮಯದಲ್ಲಿ ಸದರಿ ಟ್ರ್ಯಾಕ್ಟರನ ಚಾಲಕ ಸ್ಥಳದಲ್ಲಿ ಇರಲಿಲ್ಲಾ. ಆದರಿಂದ ಯಾರು ಎಂದು ಗೊತ್ತಾಗಿರುವುದಿಲ್ಲಾ. ಮುಂದೆಯ ಸಹಾ ಟ್ರ್ಯಾಕ್ಟರನ ಮಾಲೀಕ ಮತ್ತು ಚಾಲಕ ಯಾರು ಅಂತಾ ಗೊತ್ತಾಗಿರುವುದಿಲ್ಲಾ.

**<u>ಪಾಟೀ ಸವಾಲುಃ ಸ.ಸ.ಅ. ರವರಿಂದ</u>**

ದಿಃ 09.10.2021 ರಂದು ಅಪಘಾತವಾಗಿರುತ್ತದೆ ಎಂದರೆ ಸರಿ. ಚಾಸಾ-2 ರವರು ಅಪಘಾತವಾದ ವಿಷಯವನ್ನು ತಿಳಿಸಿರುತ್ತಾರೆ ಎಂದರೆ ಸರಿ. ನಂತರ ಚಾಲಕನ ಹೆಸರು ಅಂಬರೀಶ ತಂದೆ ಅಪ್ಪಸಾಬ ಅಂತಾ ಗೊತ್ತಾಗಿರುತ್ತದೆ ಎಂದರೆ ಸರಿ. ದಿಃ10.10.2021 ರಂದು ಅಪಘಾತವಾಗಿರುವ ಕುರಿತು ಕೇಳಿ ತಿಳಿದುಕೊಂಡಿರುತ್ತೇನೆ ಎಂದು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**<u>ಪಾಟೀ ಸವಾಲುಃ ಆರೋಪಿ ಶ್ರೀ SGA ವಕೀಲರಿಂದ</u>**

ಆರೋಪಿ ಪರ ವಕೀಲರು ಯಾವುದೇ ಪಾಟೀ ಸವಾಲು ಇಲ್ಲಾ ಎಂದು ತಿಳಿಸಿರುತ್ತಾರೆ.

**<u>ಮರು ವಿಚಾರಣೆಃ - ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ